ಪಿ.ಬಿ. ಪ್ರಸನ್ನ ದಕ್ಷಿಣ ಕನ್ನಡ ಜಿಲ್ಲೆಯ ಹಳೆಯಂಗಡಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕನ್ನಡ ಸಹ ಪ್ರಾಧ್ಯಾಪಕರು. 'ಗಣಪ ಮತ್ತು ಗಾಂಪ', 'ಮಣ್ಣಿಂದ ಕಾಯ', 'ತನುವಿನೊಳಗೆ ಹುಸಿತುಂಬಿ' ಹಾಗೂ 'ಉರಗವೇಣಿಯರೆಲ್ಲ ಕೇಳಿ' ಎಂಬ ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ. ಅವರ ಹಾಸ್ಯಪ್ರಬಂಧಗಳ ಸಂಕಲನ ಹಾಗೂ ಕವನ ಸಂಕಲನ ಪ್ರಕಟವಾಗಿವೆ.

ಇದ್ದಾಗ ಹೊರಗೆ ವಾಕಿಂಗಿಗೆ ಅಂತ ಹೋಗಿ ವಾಪಸು ಬರುವಾಗ ತಮ್ಮ ಮನೆ ಯಾವುದು ಅಂತ ಗೊತ್ತಾಗದೇ ಅಪಾರ್ಟ್‌ಮೆಂಟಿನ ಬುಡದಲ್ಲಿಯೇ ಸಂಜೆ ತನಕ ನಿಂತಿದ್ದರು. 'ಏ ಸಾಲಾ ಬುಡ್ಡಾ ಕಹಾಂಸೆ ಆಯಾ? ಹಮ್ಕೋ ತಕ್ಲೀಫ್ ದೇನೇ ಕೇಲಿಯೇ' ಅಂತ ಸೆಕ್ಯುರಿಟಿಯವ ಕಟುವಾಗಿ ಹೇಳಿದ್ದ. 'ನಾವು ಇಲ್ಲದೇ ಇದ್ದಾಗ ನೀವು ಹೊರಗೆ ಹೋದ್ರೆ ಜಾಗ್ರತೆ' ಅಂತ ಮಗ ಸೊಸೆ ಬೇರೆ ತಾಕೀತು ಮಾಡಿದ್ದರು.

ರಾಯರಿಗೆ ಎಲೆ ಅಡಿಕೆ ತಿನ್ನುವ ಅಭ್ಯಾಸ ಇತ್ತು. ಅದು ಯಾವಾಗಲೂ ಅಲ್ಲ. ಯಾವಾಗಲಾದರೂ ಬಾಯಿ ತುಂಬ ಚಪ್ಪೆ ಅಂತ ಅನಿಸಿದಾಗ, ಊಟ ತುಂಬ ಜೋರಾದಾಗ ಎಲೆ ಅಡಿಕೆ ಹಾಕಿಕೊಳ್ಳುವ ಅಭ್ಯಾಸ ಇತ್ತು. ಮಗನ ಫ್ಲ್ಯಾಟಿಗೆ ಬಂದ ಹೊಸದರಲ್ಲಿ ಹೀಗೆ ಒಮ್ಮೆ ಬಾಯಿ ಚಪ್ಪೆ ಆಯಿತು ಅಂತ ಬೀಡ ಹಾಕಿಕೊಂಡರು. ಸಿಂಕಿನಲ್ಲಿ ಉಗುಳಿದಾಗ ಅದು ಕಟ್ಟಿ ಹೋಯಿತು. 'ಮಾವ... ಇಂಥದನ್ನು ನೀವು ನಿಮ್ಮ ಹಳ್ಳಿಯ ಮನೆಯಲ್ಲಿ ಇಟ್ಟುಕೊಳ್ಳಿ. ಇಲ್ಲೆಲ್ಲ ಹಾಗೆ ಉಗುಳಿ ಸಿಂಕೆಲ್ಲ ಕಟ್ಟುವ ಹಾಗೆ ಮಾಡಬೇಡಿ' ಅಂತ ಸೊಸೆ ಪಿರಿಪಿರಿ ಮಾಡಿದ್ದಳು. ಕೆಲವು ದಿನಗಳ ನಂತರ ಮೊಮ್ಮಗನ ಹತ್ತಿರ ಬೀಡ ತರಿಸಿದ್ದರು. ಹೇಗೂ ಮನೆಯಲ್ಲಿ ಯಾರೂ ಇಲ್ಲ ಅಂತ ಲೆಕ್ಕ ಹಾಕಿ ಬಾಯಿತುಂಬ ಎಲೆ ಅಡಿಕೆ ಹಾಕಿಕೊಂಡು ಅದರ ರಸ ತುಂಬಿಸಿಕೊಂಡು ಸುಖವನ್ನು ಅನುಭವಿಸುತ್ತಿದ್ದರು. ಅಷ್ಟರಲ್ಲಿ ಕಾಲಿಂಗ್ ಬೆಲ್ ಸದ್ದಾಯಿತು. ಹೆಂಡತಿಯನ್ನು ಟ್ರೀಟ್‌ಮೆಂಟಿಗೆ ಅಂತ ಕರೆದುಕೊಂಡು ಹೋದ ಮಗ, ಸೊಸೆ ವಾಪಸ್ ಬಂದ್ರು ಅಂತ ಅಂದುಕೊಂಡು ಅವಸರದಲ್ಲಿ ಕಿಟಕಿಯಿಂದ ಹೊರಗೆ ಉಗುಳಿದರು. ಕೆಳಗಿನ ಮಹಡಿಯಲ್ಲಿ ಬಟ್ಟೆ ಒಣಗ್ಲಿಕ್ಕೆ ಹಾಕಿದ್ದರ ಮೇಲೆ ಎಂಜಲು ಬಿತ್ತು. ಮಾತ್ರ ಅಲ್ಲ ಬಟ್ಟೆಗಳೆಲ್ಲ ಕೆಂಪಾಯಿತು. ಆ ಮನೆಯ ಧಡೂತಿ ಪಂಜಾಬಿ ಹೆಂಗಸು, 'ವೋ ಬುಡ್ಡೇ ಕೋ ಝುರಾ ಡೀಸೆನ್ಸೀ ತೋ ಸಿಖಾವೋ. ಸಾಲಾ ಥೂಪ್ ಥೂಪ್‌ಕೆ ಸಾರಾ ಕಪಡಾ ಸತ್ಯಾನಾಶ್ ಕರ್ದಿಯಾ' ಅಂತ ಬಾಗಿಲಿಗೆ ಬಂದು ಅರಚಾಡಿ ಹೋದಳು. ಅಂದಿನಿಂದ ರಾಯರ ಬೀಡದ ಸಹವಾಸ ಸಂಪೂರ್ಣ ನಿಂತಿತ್ತು. ಇದರಿಂದ ಅವರ ಮಂಡೆ ಬಿಂಗ್ರಿ ಆಗಿತ್ತು. ಎಡೆಯಲ್ಲಿ ಒಂದೆರಡು ಸರ್ತಿ ಮಗ, ಸೊಸೆಯಂದಿರ ಒಟ್ಟಿಗೆ ನಾಕಾರು ದಿನಗಳ ಮಟ್ಟಿಗೆ ಊರಿಗೆ ಹೋದಾಗ ಮಾತ್ರ ಅವರಿಗೆ ಸಂಪೂರ್ಣ ಸ್ವಾತಂತ್ರ್ಯ ಸಿಕ್ಕಿದ ಅನುಭವ ಆಗ್ತಿತ್ತು. ತನಗೆ ಹಾಕಬೇಕು ಅನಿಸಿದಷ್ಟು ಸರ್ತಿ ಬೀಡ ಹಾಕುದು ಉಗುಳುದು ಮಾಡ್ತಿದ್ದರು. ಆದರೆ, ಅದಕ್ಕೂ ಕಲ್ಲು ಬಿತ್ತು.

ಯಾವಾಗ ಅಂದ್ರೆ ಎರಡು ವರ್ಷಗಳ ಹಿಂದೆ ಕೊರೊನಾ ಅಂತ ಕೂಗು ಎದ್ದಿತಲ್ಲಾ? ಆಗ.

'ಅಪ್ಪಾ... ನೀವು ಎಲ್ಲಿ ಸಾ ಹೊರಗೆ ಹೋಗುವ ಹಾಗಿಲ್ಲ. ಟಿವಿಯಲ್ಲಿ ಪೇಪರಿನಲ್ಲಿ ಎಲ್ಲ ಕಡೆ ಬರ್ತಾ ಉಂಟು ವಯಸ್ಸಾದವರನ್ನು, ಕ್ಯಾನ್ಸರ್ ಪೀಡಿತರನ್ನು ಎಲ್ಲ ಮನೆಯಲ್ಲಿಯೇ ಇಟ್ಟುಕೊಳ್ಳಿ, ಹೊರಗೆ ಹೋಗ್ಲಿಕ್ಕೆ ಬಿಡಬೇಡಿ ಅಂತ. ನಿಮಗೆ ಏಜಾಯಿತು, ಅಮ್ಮ ಪೂರ ಹುಷಾರ್ ಆಗ್ಲಿಲ್ಲ. ಹಾಗಾಗಿ, ನೀವು ಎಂತಕ್ಕೆ ಸಾ ಮನೆಯಿಂದ ಹೊರಗೆ ಹೋಗುದು ಬೇಡ' ಅಂತ ಮಗ ತಾಕೀತು ಮಾಡಿದ. ಮಾತ್ರ ಅಲ್ಲ, ಲಾಕ್‌ಡೌನ್ ಅಂತ ಇಡೀ ಲೋಕವೇ ತಣ್ಣಗಾಗಿ ಚಪ್ಪೆಗಟ್ಟಿತ್ತಲ್ಲಾ ಆಗ ರಾಯರಿಗೆ ಮಂಡೆ ಪೂರ ಹಾಳಾಯಿತು. ತಾವು ಇರುವ ಮನೆ, ಒಂದು ಜೈಲು ಅಂತ ಅನಿಸ್ಲಿಕ್ಕೆ ಸುರುವಾಯಿತು. ಮನೆಯಿಂದ ಹೊರಗೆ ಹೋಗುವ ಹಾಗೆಯೇ ಇಲ್ಲ. ದೇವರೇ ಇದೊಂದು ಸೀಕು ಎಲ್ಲಿಂದ ಬಂತಾ ಏನ, ಯಾವಾಗ ಮುಗೀತದಾ ಏನ ಅಂತ ಎಣಿಸಲಿಕ್ಕೆ ಸುರು ಮಾಡಿದ್ರು.

ಒಂದು ವರ್ಷದ ನಂತರ ಅವರಿಗೇ ಉಸಿರಾಟದ ಸಮಸ್ಯೆ ಸುರುವಾಯಿತು. ಮನೆಯಲ್ಲಿದ್ದವರೆಲ್ಲರೂ ಇದು ಕೊರೊನಾದ ಎರಡನೆಯ ಅಲೆಯ ಉಪದ್ರ ಅಂತ ಎಣಿಸಿದ್ದರು. ಒಮ್ಮಿಂದೊಮ್ಮೆಗೇ ರಾಯರಿಗೆ ಮಾತಾಡ್ಲಿಕ್ಕೆ ಕಂಡಾಬಟ್ಟೆ ಕಷ್ಟ ಆಗಿ ಮುಖ ಎಲ್ಲ